<u>ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ</u>

<u>ಸಿಸಿ ನಂಃ 50/2016</u>

<u>ಸಿಡಬ್ಲ್ಯೂಃ22 ಪಿ ಡಬ್ಲ್ಯೂಃ19</u>

ಹೆಸರುಃ ಭರಮಗೌಡ

ತಂದೆ ಹೆಸರುಃ ವಾಸುದೇವಗೌಡ ದ್ಯಾಮನಗೌಡ್ರ

ವಯಸ್ಸುಃ 49 ವರ್ಷಗಳು.

ಉದ್ಯೋಗಃ ವ್ಯವಸಾಯ

ವಾಸ ಸ್ಥಳಃ ಹಿರೇಬೂದಿಹಾಳ.

<u>ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ ದಿಃ 10/06/2025.</u>

<u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>

ಚಾಸಾಃ1 ರಿಂದ 21, 23 ರಿಂದ 36 ಪರಿಚಯ ಇರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ 1 ಮತ್ತು 2 ನೇ ಆರೋಪಿತರು ಹಾಜರು ಇದ್ದು, ಅವರ ಪರಿಚಯ ಇರುವುದಿಲ್ಲ, ನ್ಯಾಯಾಲಯದ ಮುಂದೆ ಈ ದಿನ 4 ಮತ್ತು 5 ನೇ ಆರೋಪಿತರು ಗೈರು ಹಾಜರಾಗಿದ್ದು, ಆ ಬಗ್ಗೆ ಆರೋಪಿತರ ಪರ ವಕೀಲರು ಆರೋಪಿತರ ಗುರುತಿನ ಬಗ್ಗೆ ತಕರಾರು ಇರುವುದಿಲ್ಲ ಅಂತ ವಿನಾಯಿತಿ ಅರ್ಜಿ ಸಲ್ಲಿಸಿದ್ದು, ಸಾಕ್ಷಿ 4 ಮತ್ತು 5 ನೇ ಆರೋಪಿತರು ಪರಿಚಯ ಇರುವುದಿಲ್ಲ ಎಂದು ನುಡಿಯುತ್ತಾರೆ. ಈ ಎಲ್ಲಾ ಆರೋಪಿತರು ತಮ್ಮ ಅಧಿಕಾರಿದ ಅವಧಿಯಲ್ಲಿ ಮರೇಗಾ ಯೋಜನೆಯಡಿಯಲ್ಲಿ ಸ್ವಲ್ಪ ಕೂಲಿಕಾರ್ಮಿಕರನ್ನು ತೆಗೆದುಕೊಂಡು ಬಹಳಷ್ಟು ಮರೇಗಾ ಯೋಜನೆ ಪಟ್ಟಿಗಳಲ್ಲಿ ಕೂಲಿಕಾರರನ್ನು ನಮೂದಿಸಿದ್ದು ಹಾಗೂ ಅವರ ಖೊಟ್ಟಿ ಸಹಿಗಳನ್ನು ಮಾಡಿ ಅವರ ಖಾತೆಗೆ ಬಂದ ಹಣವನ್ನು ತಮ್ಮ ಖಾತೆಗೆ ವರ್ಗಾವಣೆ ಮಾಡಿಕೊಳ್ಳುವ ಮೂಲಕ ಸರಕಾರಕ್ಕೆ ಹಾಗೂ ಕೂಲಿಕಾರರಿಗೆ ಮೋಸ ಹಾಗೂ ನಂಬಿಕೆ ದ್ರೋಹವನ್ನು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಈ ಪ್ರಕರಣದ ಕುರಿತು ಪೊಲೀಸರಿಗೆ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)**

<u>ಪಾಟೀ ಸವಾಲುಃ ಮಾನ್ಯ ಸಸಅ ರವರಿಂದಃ</u>

1. ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ಉಳಿತಾಯ ಖಾತೆ ಕೆ ವಿ ಜಿ ಬ್ಯಾಂಕನಲ್ಲಿ ಇದೆ ಎಂದರೆ ಸರಿಯಲ್ಲ. ಅದರ ನಂಃ9381 ಆಗಿರುತ್ತದೆ ಎಂದರೆ ಸರಿಯಲ್ಲ.

ನಾನು ಗುತ್ತಿಗೆದಾರನಾಗಿ ಪರವಾನಗಿ ಪಡೆದಿದ್ದೇನೆ ಎಂದರೆ ಸರಿ. ನಾನು ಕಾಮಗಾರಿ ಕೆಲಸಕ್ಕೆ ಟ್ರಾಕ್ಟರಗಳನ್ನು ಬಾಡಿಗೆಗೆ ತೆಗೆದುಕೊಂಡು ಹೋಗಿ ರಸ್ತೆಗಳಿಗೆ ಕಡಿ, ಕಲ್ಲು ಮೋಹರಂ ಮಣ್ಣು ಹಾಕಿ ರಸ್ತೆ ಮಾಡಿಸಿರುತ್ತೇನೆ ಎಂದರೆ ಸರಿ. ಸುಮಾರು ನಾಲ್ಕು ಐದು ವರ್ಷಗಳ ಹಿಂದೆ ಇಂಗಳಗಿ ಗ್ರಾಮ ಪಂಚಾಯತಿ ವತಿಯಿಂದ ನಮ್ಮ ಊರಿನಲ್ಲಿ ಹಾಗೂ ಇಂಗಳಗಿ ಗ್ರಾಮದ ಹದ್ದಿನಲ್ಲಿ ರಸ್ತೆ ಸುಧಾರಣೆ ಹಾಗೂ ಹೊಸದಾಗಿ ರಸ್ತೆಯನ್ನು ಕೂಲಿಕಾರ ಜನರ ಕಡೆಯಿಂದ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. 2009-2010 ಮತ್ತು 2010-2011 ರಲ್ಲಿ ಇಂಗಳಗಿ ಗ್ರಾಮ ಪಂಚಾಯತ ನಮ್ಮ ಊರು ಮತ್ತು ಇಂಗಳಗಿ ಗ್ರಾಮ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೂಲಿಕಾರರಿಂದ ಹೊಸದಾಗಿ ರಸ್ತೆ ಮಾಡಿಸುವುದು ಮತ್ತು ರೈತರ ಹೊಲದಲ್ಲಿ ಕೃಷಿ ಹೊಂಡ ಮತ್ತು ಬದುಗಳನ್ನು ಹಾಕಿಸಿದ್ದು ಇರುತ್ತದೆ ಎಂದರೆ ಸರಿ.

ಗ್ರಾಮ ಪಂಚಾಯತ ಕಾರ್ಯದರ್ಶಿ ಎ ಎಮ್ ನದಾಫ ಇವರ ಪರಿಚಯ ಇದೆ ಎಂದರೆ ಸರಿಯಲ್ಲ. ನಾನು ರಸ್ತೆ ಕೆಲಸಗಳಿಗೆ ಕಲ್ಲು, ಕಡಿ ಹಾಗೂ ಮೊಹರಂ ಮಣ್ಣನ್ನು ಪೂರೈಸುವುದು ಹಾಗೂ ಕೂಲಿ ಆಳುಗಳಿಂದ ಕೆಲಸ ಮಾಡಿಸುವುದು ಇದೆ ಎಂದು ನನ್ನನ್ನು ಕರೆ ಕಳಿಸಿದರು ಎಂದರೆ ಸರಿಯಲ್ಲ. ಈ ಪ್ರಕಾರ ಮಾರ್ಚ ತಿಂಗಳ ಒಳಗಾಗಿ ಸರಕಾರದಿಂದ ಬಂದ ಅನುದಾನದ ಹಣವನ್ನು ಖರ್ಚು ಮಾಡಲು ಒತ್ತಾಯ ಮಾಡುತಿದ್ದಾರೆ ಎಂದು ಎ ಎಮ್ ನದಾಫ ಇವರು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆದೇ ಪ್ರಕಾರ ಸದರಿ ಇಂಗಳಗಿ ತರ್ಲಘಟ್ಟ ರಸ್ತೆಯ ಗಿಡ ಕಂಟಿಗಳನ್ನು ಕಡಿಸಲು ಹೇಳಿದ ಪ್ರಕಾರ ನಾನು ಕೂಲಿ ಆಳುಗಳನ್ನು ಕರೆದುಕೊಂಡು ಬಂದು ಗಿಡಗಂಟಿಗಳನ್ನು ಕಡಿಸಿದ್ದು ಹಾಗೂ ಕಡಿ ಹಾಗೂ ಮೊಹರಂ ಮಣ್ಣನ್ನು ಸಪ್ಲೈ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಸುಮಾರು 1 ಕಿ.ಮೀ ವರೆಗೆ ಇಂಗಳಗಿ ತರ್ಲಘಟ್ಟ ರಸ್ತೆಯಲ್ಲಿ ಬೆಳೆದ ಗಿಡ ಗಂಟಿಗಳನ್ನು ತೆಗೆಸಿ ಕಡಿ ಮತ್ತು ಮೊಹರಂ ಮಣ್ಣನ್ನು ನನ್ನ ಪರಿಚಯ ವ್ಯಕ್ತಿಗಳಾದ ಬಸನಗೌಡ ಖಾನಗೌಡ್ರ, ಶ್ರಿಶೈಲಗೌಡ ಮಹಾಲಿಂಗೌಡ ಯರೆಡ್ಡಿ ಇವರಗಳ ಟ್ರ್ಯಾಕ್ಟರಗಳ ಮುಖಾಂತರ ಬೆಂಡಿಗೇರಿ ಶರೇವಾಡ ಗ್ರಾಮದಿಂದ ಕಡಿಯನ್ನು ಖರೀದಿ ಮಾಡಿಕೊಂಡು ಮೋಹರಂ ಮಣ್ಣನ್ನು ಬೆಂಡಿಗೇರಿ ಗ್ರಾಮದಲ್ಲಿ ಜೆಸಿಬಿ ಮುಖಾಂತರ ತೆಗೆಯಿಸಿ ಟ್ರ್ಯಾಕ್ಟರಗಳ ಮುಖಾಂತರ ತಂದು ರಸ್ತೆಗೆ ಹಾಕಿಸಿರುತ್ತೇನೆ ಎಂದರೆ ಸರಿಯಲ್ಲ. ಪುನಃ ಕಾರ್ಯದರ್ಶಿಯವರು ನನಗೆ ಕರೆಯಿಸಿ ರಸ್ತೆಯ ಆಜು ಬಾಜು ಗಟಾರಗಳಿಂದ ಮಣ್ಣನ್ನು ತೆಗೆಯಿಸಿ ರಸ್ತೆಗೆ ಹಾಕಿಸಲು ಆಳಗಳನ್ನು ಕರೆದುಕೊಂಡು ಬರಲು ತಿಳಿಸಿದ್ದು ಆ ಪ್ರಕಾರ ನಾನು ಆಳಗಳನ್ನು ಪೂರೈಸಿರುತ್ತೇನೆ ಎಂದರೆ ಸರಿಯಲ್ಲ.

ಜೆಸಿಬಿ ಮುಖಾಂತರ ಮಣ್ಣು ತೆಗೆಯಿಸಿ ರಸ್ತೆಯಲ್ಲಿ ಟ್ರ್ಯಾಕ್ಟರ ಮೂಲಕ ಸುಮಾರು 20

ದಿವಗಳವರೆಗೆ ರಸ್ತೆಗೆ ಹಾಕಿಸಿದ್ದು, ಜೆಸಿಬಿ ಹಾಗೂ ಮೋಹರಂ ಮಣ್ಣಿನ ಟ್ರ್ಯಾಕ್ಟರಗಳ ಬಾಡಿಗೆ ಬಾಬ್ತು ಸುಮಾರು ರೂ 80,000/ ಕಡಿ ಕಲ್ಲನ್ನು ಬೆಂಡಿಗೇರಿ ಗುಡ್ಡದಿಂದ ಹಾಗೂ ಶರೇವಾಡ ಟ್ರ್ಯಾಕ್ಟರಗಳ ಮುಖಾಂತರ ತರಿಸಿದ್ದು, ಸುಮಾರು ಬಾಬ್ತು ರೂ 1,20,000/ ಮತ್ತು ಕೂಲಿ ಆಳುಗಳಿಗೆ ಗಿಡ ಗಂಟಿ ಕಡಿದ ಬಾಬ್ತ ಮತ್ತು ರಸ್ತೆ ಮಾಡಿದ ಬಾಬ್ತ ರೂ 60,000/, ನೀರಿನ ಗಾಡಿಗೆ ರೂ 10,000/ ರೂಲರ್ ಗಾಡಿಗೆ ಸುಮಾರು ರೂ 5,000/ ಹೀಗೆ ಒಟ್ಟು ಬಾಬ್ತ ರೂ 2,45,000/ ಒಟ್ಟು ಖರ್ಚು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನಾನು ಇಂಗಳಗಿ ತರ್ಲಘಟ್ಟ ರಸ್ತೆಗೆ ಮೇಲಿನಂತೆ ಮಾಲ ಸಪ್ಲೈ ಮಾಡಿ ಉತ್ತಮ ರಸ್ತೆ ತಯಾರಿಸಿದ ಬಗ್ಗೆ ನನ್ನ ಖಾತೆಗೆ ಎರಡು ಚೆಕ್ಕುಗಳ ಮುಖಾಂತರ ಸುಮಾರು ರೂ 2,82,000/ ಜಮಾ ಮಾಡಲಾಗಿದೆ ಅಂತ ಕಾರ್ಯದರ್ಶಿಯವರು ಹೇಳಿದ ಮೇರೆಗೆ ನಾನು ದಿಃ03.02.2010 ರಂದು ಬ್ಯಾಂಕಿಗೆ ಹೋಗಿ ನೋಡಿದಾಗ ರೂ 1,52,600/ ಹಾಗೂ ರೂ 1,30,800/ ರಸ್ತೆ ಮಾಡಿಸಿದ ಬಗ್ಗೆ ಜಮಾ ಆಗಿತ್ತು ಎಂದರೆ ಸರಿಯಲ್ಲ.

ಈಗ ತಾವು ತೋರಿಸಿದ ಕೂಲಿಕಾರರ ಪಟ್ಟಿ ಅ. ನಂಃ61955 ಇದರಲ್ಲಿ ನೋಡಲಾಗಿ 218 ಜನ ಕೂಲಿಕಾರರು ಇಂಗಳಗಿ ತರ್ಲಘಟ್ಟ ರಸ್ತೆ ಕೂಲಿಕಾರ ಕೆಲಸ ಮಾಡಿದ ಹಾಗೇ ಪ್ರತಿ ದಿವಸಕ್ಕೆ ರೂ 100/ ರಂತೆ ಒಟ್ಟು ರೂ 700/ ಕೂಲಿಕಾರರ ಹಣ ಕೊಟ್ಟ ಬಗ್ಗೆ ಅವರ ಹೆಬ್ಬಟ್ಟಿನ ಸಹಿ ಕನ್ನಡ ಹಾಗೂ ಇಂಗ್ಲಿಷನಲ್ಲಿ ಸಹಿ ಮಾಡಿಸಿಕೊಂಡು ಅದರಲ್ಲಿ ಕಾರ್ಯದರ್ಶಿ ನದಾಫ ಇವರ ಸಹಿ ಮಾಡಿದ್ದು ಮತ್ತು ಅಧ್ಯಕ್ಷರ ಸೀಲ್ ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ. ಇಂಗಳಗಿ ತರ್ಲಘಟ್ಟ ರಸ್ತೆಗೆ ಮಾಲ ಸಪ್ಲೈ ಮಾಡಿ ಕಾರ್ಯದರ್ಶಿ ಹೇಳಿದ ಪ್ರಕಾರ ಜನವರಿ ತಿಂಗಳನಲ್ಲಿ ಕೆಲಸ ಮಾಡಿ ಪೂರ್ತಿ ಮುಗಿಸಿರುತ್ತೇನೆ ಎಂದರೆ ಸರಿಯಲ್ಲ. ಕೂಲಿಕಾರರ ಪಟ್ಟಿಯಲ್ಲಿ ದಿಃ13.03.2010 ರಿಂದ 20.03.2010 ವರೆಗೆ ಕೆಲಸ ಮಾಡಿಸಿರುವುದಾಗಿ ನಮೂದಿಸಲಾಗಿದ್ದು, ಸಹಿಗಳನ್ನು ಖೊಟ್ಟಿಯಾಗಿ ತಯಾರಿಸಲಾಗಿದ್ದು, ಅದನ್ನು ನಂಬುವಂತೆ ಕಾರ್ಯಾಲಯದಲ್ಲಿ ಇಟ್ಟು, ಹಣ ಮಾತ್ರ ನನಗೆ ಸಂದಾಯ ಮಾಡಿದ್ದು ನಿಜವಿರುತ್ತದೆ ಎಂದರೆ ಸರಿಯಲ್ಲ.

ಕೂಲಿಕಾರರ ಪಟ್ಟಿ ಮೊತ್ತವನ್ನು ನನ್ನ ಖಾತೆಗೆ ಜಮಾ ಮಾಡಲು ಗ್ರಾಮ ಪಂಚಾಯತ ಚೆಕ್ಕು ಕಳುಹಿಸಿದ್ದು, ಚೆಕ್ಕ ನಂಃ172556 ದಿಃ01.02.2010 ಮೊತ್ತ ರೂ 1,52,600/ ಚೆಕ್ಕಿನ ಮೇಲೆ ಅಧ್ಯಕ್ಷರ ಮತ್ತು ಕಾರ್ಯದರ್ಶಿಯ ಸಹಿ ಇರುತ್ತದೆ ಎಂದರೆ ಸರಿಯಲ್ಲ.

ಕೂಲಿಕಾರರ ಪಟ್ಟಿ ಅ ನಂಃ61175 ನ್ನು ನೋಡಲಾಗಿ 218 ಜನ ಕೂಲಿಕಾರರು ಇಂಗಳಗಿ

ತರ್ಲಘಟ್ಟ ಕೂಲಿ ಕೆಲಸ ಮಾಡಿದಂತೆ ಅವರಿಗೆ ರೂ 721/ ರಂತೆ ಕೂಲಿ ಕೊಟ್ಟಂತೆ ಕೂಲಿಕಾರರ ಹೆಬ್ಬಟ್ಟಿನ ಸಹಿ ಹಾಗೂ ಕನ್ನಡ ವ ಇಂಗ್ಲೀಷ ಸಹಿ ಖೊಟ್ಟಿಯಾಗಿ ಮಾಡಿ ತಯಾರಿಸಲಾಗಿತ್ತು ಎಂದರೆ ಸರಿಯಲ್ಲ.

ಕೂಲಿಕಾರರ ಪಟ್ಟಿಯಲ್ಲಿ ಇದ್ದ ಕಾಮಗಾರಿಯನ್ನು ನಾನು ಗುತ್ತಿಗೆ ಆದಾರದ ಮೇಲೆ ಪಂಚಾಯತಿ ಇವರ ಆದೇಶದಂತೆ ಸಾಮಾಗ್ರಿಗಳನ್ನು ಪೂರೈಸಿ ಸ್ವತಃ ಕೂಲಿಕಾರರ ಜನರಿಂದ ಮಾಡಿಸಿ ಕೂಲಿ ಹಣವನ್ನು ನೇರವಾಗಿ ಕೂಲಿಕಾರರಿಗೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಈಗ ಇದರಲ್ಲಿ ಇದ್ದ ಕೂಲಿಕಾರರ ಮುಂದೆ ಒಂದು ವಾರ ಕೆಲಸ ಮಾಡಿಸಿ ರೂ 721/ರಂತೆ ಕೂಲಿ ಹಣ ಕೊಟ್ಟು ಸಹಿ ಪಡೆಯಲಾಯಿತು ಎಂದರೆ ಸರಿಯಲ್ಲ.

ಕೂಲಿಕಾರರ ಪಟ್ಟಿಯಲ್ಲಿ ಇದ್ದ 218 ಜನ ಕೂಲಿಕಾರರಿಗೆ ಹಣ ಕೊಟ್ಟಂತೆ ಚೆಕ್ಕು ಖರ್ಚು ಆಗಿದ್ದು ತೋರಿಸಿ ಚೆಕ್ಕ ನಂಃ172561 ದಿಃ20.03.2010 ಮೊತ್ತ ರೂ 1,54,590/ ಈ ಚೆಕ್ಕಿಗೆ ಅಧ್ಯಕ್ಷ ಮತ್ತು ಕಾರ್ಯದರ್ಶಿ ಇವರ ಸಹಿ ಇರುತ್ತದೆ ಮತ್ತು ಈ ಚೆಕ್ಕಿನ ಸಂಗಡ ಇದ್ದ ಸೂಚನಾ ಪತ್ರದಲ್ಲಿ ಬಂಗಾರಪ್ಪ ಯಾವಗಲ್ ಹಾಗೂ ಏಳು ಜನರ ಹೆಸರುಗಳು ನಮೂದಿಸಿ ಅವರ ಹೆಸರುಗಳ ಮುಂದೆ ಬ್ಯಾಂಕಿನ ಅಕೌಂಟ ನಂಬರಗಳನ್ನು ನಮೂದಿಸಿ 1 ರಿಂದ 6 ರ ವರಗಿನ ವರೆಗೆ ರೂ 22,000/ ಗಳಂತೆ ಜಮಾ ಮಾಡಲು ಹಾಗೂ ಅ,ನಂಃ7 ನ ಹೆಸರು ಮುಂದೆ ರೂ 22,590/ ಜಮಾ ಮಾಡುವಂತೆ ಆದೇಶ ಮಾಡಿ ಸೂಚನಾ ಪತ್ರಕ್ಕೆ ಕಾರ್ಯದರ್ಶಿ ಹಾಗೂ ಅಧ್ಯಕ್ಷರು ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಈಗ ತಾವು ತೋರಿಸಿದ ಕೂಲಿಕಾರರ ಪಟ್ಟಿ ಅ.ನಂಃ61176 ಇದರಲ್ಲಿ ನೋಡಲಾಗಿ 218 ಜನ ಕೂಲಿಕಾರರು ಇಂಗಳಗಿ ತರ್ಲಘಟ್ಟ ರಸ್ತೆ ಕೂಲಿ ಕೆಲಸ ಮಾಡಿದಂತೆ ಅವರಿಗೆ ಪ್ರತಿ 618/ ಕೂಲಿ ಕೊಟ್ಟಂತೆ ಹೆಬ್ಬಟ್ಟಿನ ಸಹಿ, ಕನ್ನಡ ಮತ್ತು ಇಂಗ್ಲೀಷ ಸಹಿಗಳನ್ನು ಮಾಡಲಾಗಿದೆ ಎಂಬ ಖೊಟ್ಟಿಯಾಗಿ ಪಟ್ಟಿಯನ್ನು ತಯಾರಿಸಲಾಗಿತ್ತು ಎಂದರೆ ಸರಿಯಲ್ಲ.

ಕೂಲಿಕಾರರ ಪಟ್ಟಿ ಮೊತ್ತವನ್ನು ನನ್ನ ಖಾತೆಗೆ ಜಮಾ ಮಾಡಲು ಗ್ರಾಮ ಪಂಚಾಯತಯಿಂದ ಚೆಕ್ಕ ಕಳುಹಿಸಿದ್ದು ಚೆಕ್ಕಿನ ಪ್ರತಿಯನ್ನು ನೋಡಿ ಚೆಕ್ಕ ನಂಃ172557 ದಿಃ01.02.2010 ಮೊತ್ತ ರೂ 1,30,800/ ಚೆಕ್ಕ ಮೇಲೆ ಅಧ್ಯಕ್ಷರು ಮತ್ತು ಕಾರ್ಯದರ್ಶಿ ಇವರು ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಈ ಪ್ರಕಾರ ಒಟ್ಟಾರೆಯಾಗಿ ಹಣವನ್ನು ನನ್ನ ಖಾತೆಗೆ ಜಮಾ ಆದ ಹಣವನ್ನು ಗ್ರಾಮ ಪಂಚಾಯತ ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ಸದಸ್ಯರು ಮೀಲಾಪೆಯಾಗಿ ಕೂಲಿಕಾರ

ಹಣವನ್ನು ತಮ್ಮ ಸ್ವಂತಕ್ಕೆ ದುರ್ಬಳಕ್ಕೆ ಮಾಡಿಕೊಂಡು ಸರಕಾರಕ್ಕೆ ಮತ್ತು ಕೂಲಿಕಾರ್ಮಿಕರಿಗೆ ಮೋಸ ಹಾಗೂ ನಂಬಿಕೆ ದ್ರೋಹ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಎಮ್ ಎ ನದಾಫ ಕಾರ್ಯದರ್ಶಿ ಇವರು , ಕ್ಲರ್ಕ ಶಂಕ್ರಪ್ಪ ಹಾಗೂ ಅಧ್ಯಕ್ಷ್ಯರಾದ ನೀಲವ್ವ ಭದ್ರಾಪುರ ಇವರು ಮೀಲಾಪೆಯಾಗಿ ತಮ್ಮ ಸ್ವಂತ ಲಾಭಕ್ಕಾಗಿ ನನ್ನ ಖಾತೆಗೆ ಬೇರೆ ಕೂಲಿಕಾರರ ಹಣ ಜಮಾ ಮಾಡಿರುವುದಾಗಿ ಸುಳ್ಳು ಹೇಳಿ ನಂಬಿಸಿ ನಮ್ಮಿಂದ ಒಟ್ಟಾರೆ ರೂಪಾಯಿಗಳನ್ನು ಪಡೆದುಕೊಂಡು ತಮ್ಮ ಸ್ವಂತಕ್ಕೆ ದುರುಪಯೋಗ ಮಾಡಿಕೊಂಡು ನನಗೆ ಮತ್ತು ಸರಕಾರಕ್ಕೆ ಹಾಗೂ ಕೂಲಿ ಕಾರ್ಮಿಕರಿಗೆ ಮೋಸ ಮತ್ತು ನಂಬಿಕೆ ದ್ರೋಹ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಎಲ್ಲಾ ಸಂಗತಿಗಳು ಗೊತಿದ್ದರು ಸಹ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಓದಿ ಹೇಳಿಕೆಯನ್ನು ನಿಪಿಃ26 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**

**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಸಿಸಿ ನಂಃ 50/2016**

**ಸಿಡಬ್ಲೂಃ21 ಪಿ ಡಬ್ಲ್ಯೂಃ20**

**ಹೆಸರುಃ** ರಂಗನಗೌಡ

**ತಂದೆ ಹೆಸರುಃ** ನಿಂಗನಗೌಡ ಬಿಳೇಬಾಳ

**ವಯಸ್ಸುಃ** 45 ವರ್ಷಗಳು.

**ಉದ್ಯೋಗಃ** ವ್ಯವಸಾಯ

**ವಾಸ ಸ್ಥಳಃ** ಹಿರೇಬೂದಿಹಾಳ.

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ ದಿಃ 10/06/2025.**

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಚಾಸಾಃ1 ರಿಂದ 20 ಹಾಗೂ 22 ರಿಂದ 36 ಪರಿಚಯ ಇರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ 1 ಮತ್ತು 2 ನೇ ಆರೋಪಿತರು ನನಗೆ ಗೊತ್ತಿಲ್ಲ, ನ್ಯಾಯಾಲಯದ ಮುಂದೆ ಈ ದಿನ 4 ಮತ್ತು 5 ನೇ ಆರೋಪಿಗಳು ಗೈರು ಹಾಜರಾಗಿದ್ದು, ಅವರ ಪರಿಚಯ ಇರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಎಲ್ಲಾ ಆರೋಪಿತರು ತಮ್ಮ ಅಧಿಕಾರಿದ ಅವಧಿಯಲ್ಲಿ ಮರೇಗಾ ಯೋಜನೆಯಡಿಯಲ್ಲಿ ಸ್ವಲ್ಪ ಕೂಲಿಕಾರ್ಮಿಕರನ್ನು ತೆಗೆದುಕೊಂಡು ಬಹಳಷ್ಟು ಮರೇಗಾ ಯೋಜನೆ ಪಟ್ಟಿಗಳಲ್ಲಿ ಕೂಲಿಕಾರರನ್ನು ನಮೂದಿಸಿದ್ದು ಹಾಗೂ ಅವರ ಖೊಟ್ಟಿ ಸಹಿಗಳನ್ನು ಮಾಡಿ ಅವರ ಖಾತೆಗೆ ಬಂದ ಹಣವನ್ನು ತಮ್ಮ ಖಾತೆಗೆ ವರ್ಗಾವಣೆ ಮಾಡಿಕೊಳ್ಳುವ ಮೂಲಕ ಸರಕಾರಕ್ಕೆ ಹಾಗೂ ಕೂಲಿಕಾರರಿಗೆ ಮೋಸ ಹಾಗೂ ನಂಬಿಕೆ ದ್ರೋಹವನ್ನು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಈ ಪ್ರಕರಣದ ಕುರಿತು ಪೊಲೀಸರಿಗೆ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸಸಅ ರವರಿಂದಃ**

1. ಸುಮಾರು ನಾಲ್ಕು ಐದು ವರ್ಷಗಳ ಹಿಂದೆ ಇಂಗಳಗಿ ಗ್ರಾಮ ಪಂಚಾಯತಿ ವತಿಯಿಂದ ನಮ್ಮ ಊರಿನಲ್ಲಿ ಹಾಗೂ ಇಂಗಳಗಿ ಗ್ರಾಮದ ಹದ್ದಿನಲ್ಲಿ ರಸ್ತೆ ಸುಧಾರಣೆ ಹಾಗೂ ಹೊಸದಾಗಿ ರಸ್ತೆಯನ್ನು ಕೂಲಿಕಾರ ಜನರ ಕಡೆಯಿಂದ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ.

2. ಈ ತಾವು ತೋರಿಸಿದ ಉದ್ಯೋಗ್ಯ ಖಾತ್ರಿ ಯೋಜನೆಯಡಿಯಲ್ಲಿ ಕೂಲಿಕಾರರು ಕೆಲಸ ಮಾಡಿ ಹಾಜರಾತಿ ಪಟ್ಟಿ ನೋಡಿದೆ, ಇದರ ನಂಃ61426 ಇದ್ದು, ಹಿರೇಬೂದಿಹಾಳ, ನೆಲಗುಡ್ಡ ತರ್ಲಘಟ್ಟ ರಸ್ತೆ ಸುಧಾರಣಾ ಮಾಡಿಸಿದ ಬಗ್ಗೆ ನಾನು ಮತ್ತು ನನ್ನ ಹೆಂಡತಿ ಈ ರಸ್ತೆ ನಿರ್ಮಾಣ ಕೆಲಸಕ್ಕೆ ಹೋಗಿದ್ದರು ಸಹಿತ ನನ್ನ ಮತ್ತು ನನ್ನ ಹೆಂಡತಿಯ ಹೆಸರು ಕೂಲಿಕಾರರ ಪಟ್ಟಿಯಲ್ಲಿ ನಮೂದಿಸಿರುವುದಿಲ್ಲ ಅದಕ್ಕೆ ಗ್ರಾಮ ಪಂಚಾಯತ ಕಾರ್ಯದರ್ಶಿ ಇವರು ಜವಾಬ್ದಾರಿಯಾಗಿರುತ್ತಾರೆ ಎಂದರೆ ಸರಿಯಲ್ಲ.

3. 2009-2010 ಮತ್ತು 2010-2011 ರಲ್ಲಿ ಇಂಗಳಗಿ ಗ್ರಾಮ ಪಂಚಾಯತ ನಮ್ಮ ಊರು ಮತ್ತು ಇಂಗಳಗಿ ಗ್ರಾಮ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೂಲಿಕಾರರಿಂದ ಹೊಸದಾಗಿ ರಸ್ತೆ ಮಾಡಿಸುವುದು ಮತ್ತು ರೈತರ ಹೊಲದಲ್ಲಿ ಕೃಷಿ ಹೊಂಡ ಮತ್ತು ಬದುಗಳನ್ನು ಹಾಕಿಸುವುದು, ಕೂಲಿಕಾರರಿಗೆ ಮತ್ತು ಕೂಲಿ ಹಣವನ್ನು ಅವರ ಬ್ಯಾಂಕುಗಳಲ್ಲಿ ಇದ್ದ ಉಳಿತಾಯ ಖಾತೆಗಳಿಗೆ ಜಮಾ ಮಾಡಿಸುವುದು ಗೊತಿರುತ್ತದೆ. ಪಂಚಾಯತ ನೌಕಾರರಾದ ಶಂಕ್ರಪ್ಪ ಸಂಗಣ್ಣನವರ ಮತ್ತು ಕಾರ್ಯದರ್ಶಿಯವರು ಹೇಳಿದ್ದರಿಂದ ಕೂಲಿಕಾರರ ಜನರಿಂದ ಬ್ಯಾಂಕಿನ ಪಾಸ್ ಬುಕ್ಕಗಳನ್ನು ಹಾಗೂ ನಂಬರಗಳನ್ನು ಕೊಟ್ಟು ಬಂದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ಹೆಂಡತಿಯ ಉಳಿತಾಯ ಖಾತೆಯ ಪಾಸ್ ಬುಕ್ಕನ್ನು ಶಂಕ್ರಪ್ಪ ಸಂಗಣ್ಣನವರ ಇವರಿಗೆ ಕೊಟ್ಟು ಬಂದಿರುತ್ತೇವೆ ಎಂದರೆ ಸರಿಯಲ್ಲ. ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೂಲಿಕಾರ ಕೆಲಸ ಮಾಡಿದ ಹಾಜರಾತಿ ಪಟ್ಟಿಯನ್ನು ನೋಡಲಾಗಿ ಅದರಲ್ಲಿ ಸಂಃ61426 ಇದ್ದು, ಹಿರೇಬೂದಿಹಾಳದಿಂದ ನೆಲಗುಡ್ಡ ತರ್ಲಘಟ್ಟ ರಸ್ತೆ ಸುಧಾರಣಾ ಮಾಡಿರುವ ಬಗ್ಗೆ ಕೂಲಿ ಕೆಲಸಗಾರರ ಪಟ್ಟಿಯಲ್ಲಿ ಕೆಲಸ ಮಾಡಿದ ಬಗ್ಗೆ ಅ.ನಂಃ15 ಕ್ಕೆ ನನ್ನ ಹೆಸರು ನಮೂದಿಸಿ ನನ್ನ ಹೆಸರಿನ ಮುಂದೆ ನನ್ನ ಬ್ಯಾಂಕಿನ ಉಳಿತಾಯ ಹಾತೆ ನಂಬರ ನಮೂದಿಸಿ ರೂ 10,260/ ಜಮಾ ಮಾಡಲು ಬರೆದಿರುತ್ತಾರೆ ಎಂದರೆ ಸರಿಯಲ್ಲ. ಈ ಲಿಸ್ಟಗೆ ಹಾಗೂ ಚೆಕ್ಕಿನ ಮೇಲೆ ಪಂಚಾಯತಿ ಅಧ್ಯಕ್ಷರು ಮತ್ತು ಕಾರ್ಯದರ್ಶಿ ಇವರ ಸಹಿ ಇರುತ್ತದೆ ಎಂದರೆ ಸರಿಯಲ್ಲ. ಈ ಹಣವು ಕೂಲಿಕಾರರಿಗೆ ಕೊಡುವ ಕೂಲಿ ಹಣ ನಿಮ್ಮ ಖಾತೆಗ ಜಮಾ ಆಗಿರುತ್ತದೆ ನೀವು ದುಡಿದ ಕೂಲಿ ಹಣ ರೂ 1,400/ ಮುರಿದುಕೊಂಡು ಉಳಿದ ಬಾಕಿ ಹಣ ಬ್ಯಾಂಕಿನಿಂದ ಪಡೆದು ಕೂಲಿಕಾರರಿಗೆ ಬಟವಡೆ ಮಾಡಲು ಕೊಡ್ರಿ ಅಂತ ಕಾರ್ಯದರ್ಶಿ ಹೇಳಿದ ಪ್ರಕಾರ ನಾನು ದಿಃ25.02.2010 ರಂದು ರೂ 10,260/ ಬ್ಯಾಂಕಿನಿಂದ ಪಡೆದು ನಮ್ಮ ಕೂಲಿ ಹಣ ರೂ

1400/ ಮುರಿದುಕೊಂಡು ರೂ 8,860/ ಕಾರ್ಯದರ್ಶಿ ನದಾಫ ಇವರಿಗೆ ಕೊಟ್ಟೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ನಮ್ಮ ಊರಿನ ಶಾಂತವ್ವ ಭಜಂತ್ರಿ ಹಾಗೂ ಇನ್ನು ಅನೇಕ ಜನರು ಇದ್ದರು, ಆಗ ನಾನು ನನ್ನ ಪಾಸ್ ಬುಕ್ಕನ ಪ್ರತಿಯನ್ನು ಸಹಿ ಮಾಡಿ ಒಂದು ಬಿಳಿ ಹಾಳೆಯಲ್ಲಿ ಒಂದು ಮಾದರಿ ಸಹಿಯನ್ನು ಮಾಡಿ ಸಹಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಎಮ್ ಎ ನದಾಫ ಕಾರ್ಯದರ್ಶಿ ಇವರು , ಕ್ಲರ್ಕ ಶಂಕ್ರಪ್ಪ ಹಾಗೂ ಅಧ್ಯಕ್ಷ್ಯರಾದ ನೀಲವ್ವ ಭದ್ರಾಪುರ ಇವರು ಮೀಲಾಪೆಯಾಗಿ ತಮ್ಮ ಸ್ವಂತ ಲಾಭಕ್ಕಾಗಿ ನನ್ನ ಖಾತೆಗೆ ಬೇರೆ ಕೂಲಿಕಾರರ ಹಣ ಜಮಾ ಮಾಡಿರುವುದಾಗಿ ಸುಳ್ಳು ಹೇಳಿ ನಂಬಿಸಿ ನಮ್ಮಿಂದ ರೂ 8,860/ ರೂಪಾಯಿಗಳನ್ನು ಪಡೆದುಕೊಂಡು ತಮ್ಮ ಸ್ವಂತಕ್ಕೆ ದುರುಪಯೋಗ ಮಾಡಿಕೊಂಡು ನನಗೆ ಮತ್ತು ಸರಕಾರಕ್ಕೆ ಹಾಗೂ ಕೂಲಿ ಕಾರ್ಮಿಕರಿಗೆ ಮೋಸ ಮತ್ತು ನಂಬಿಕೆ ದ್ರೋಹ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನನಗೆ ಈ ಪ್ರಕರಣದ ಎಲ್ಲಾ ಸಂಗತಿಗಳು ಗೊತ್ತಿದ್ದರು ಸಹ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಓದಿ ಹೇಳಿಕೆಯನ್ನು ನಿಪಿಃ27 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

**Sd/-**

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**